**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್ಃ 202/2021**

ಸಿಡಬ್ಲ್ಯೂಃ 1

ಪಿಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ಬಿಬೀಹಾಜೀರಾ ಹುಬ್ಬಳ್ಳಿ |
| ಗಂಡನ ಹೆಸರು | : | ಮಹಮ್ಮದ ಅಲಿ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | : | ಮೇದೂರ |

ಇಂದು ದಿನಾಂಕಃ 19.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

1. ಚಾಸಾ-4 ನನ್ನ ಗಂಡ. ಚಾಸಾ-7 ನನಗೆ ಪರಿಚಯ. ಆರೋಪಿ 4 ಮತ್ತು 5 ನನ್ನ ಅತ್ತೆ ಮಾವ, ಆರೋಪಿ 1 ರಿಂದ 3 ನನ್ನ ಮೈದುನರು. ದಿನಾಂಕಃ 04.10.2019 ರಂದು ಆರೋಪಿತರೆಲ್ಲರೂ ಸುಮಾರು 10-30 ಗಂಟೆಗೆ ನಮ್ಮ ಮನೆಗೆ ಬಂದು ಬಾಗಿಲಲ್ಲಿ ನಿಲ್ಲಿಸಿರುವ ನಮ್ಮ ಗೋವಿನಜೋಳದ ಮಶೀನ್‌ಗಳು ನಮಗೆ ಬೇಕು ಎಂದು ಚಾಸಾ-4 ರವರನ್ನು ಕೇಳಿದರು. ಆಗ ಚಾಸಾ-4 ಅವು ನಾನು ಖರೀದಿಸಿದ್ದು, ನಾನು ಕೊಡುವುದಿಲ್ಲ ಎಂದು ಹೇಳಿದರು. ಆರೋಪಿ 1 ಮತ್ತು 2 ರವರು ನನ್ನ ಗಂಡನಿಗೆ ಕೈಯಿಂದ ಹೊಡೆದರು.

2. ಆರೋಪಿ 3 ರವರು ನನ್ನ ಗಂಡನ ಕೈಯನ್ನು ಹಿಡಿದುಕೊಂಡಿದ್ದರು. ಆರೋಪಿ 4 ಮತ್ತು 5 ರವರು ನನ್ನ ಗಂಡನ ಕಪಾಳಕ್ಕೆ ಹೊಡೆದಿರುತ್ತಾರೆ. ಆಗ ಜಗಳ ಬಿಡಿಸಲು ಹೋದಾಗ ಆರೋಪಿ 1 ರವರು ನನ್ನ ಜಡೆ ಹಿಡಿದು ಎಳೆದಾಡಿದರು. 2 ನೇ ಆರೋಪಿ ನನ್ನ ಬಟ್ಟೆ ಎಳೆದಾಡಿರುತ್ತಾರೆ. ಉಳಿದೆಲ್ಲ ಆರೋಪಿತರು ನನ್ನನ್ನು ಎಳೆದಾಡಿ ಹೊಡೆದಿರುತ್ತಾರೆ. ನಂತರ ಆರೋಪಿತರೆಲ್ಲರೂ ಗಿರಣಿಯಲ್ಲಿ ಹಿಸ್ಸೆ ಕೊಡದಿದ್ದರೆ ನಿನ್ನ ಜೀವ ತೆಗೆಯುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ಆರೋಪಿತರೆಲ್ಲರೂ ಅಲ್ಲಿಯೇ ಇದ್ದು 2 ಗೋವಿನ ಜೋಳದ ಮಶೀನ್‌ಗಳನ್ನು ಟ್ರ್ಯಾಕ್ಟರ್‌ನಲ್ಲಿ ತೆಗೆದುಕೊಂಡು ಹೋಗಿರುತ್ತಾರೆ.

3. ನಂತರ ನಾನು ಹಾಗೂ ಚಾಸಾ-4 ರವರು ರಟ್ಟೀಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ರಾಣೇಬೆನ್ನೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಾವು ಆಸ್ಪತ್ರೆಗೆ ಹೋದಾಗ ಆರೋಪಿತರು ಗಿರಣಿಯ ಬೀಗ ಮುರಿದು ಒಳಗಿದ್ದ ವಸ್ತುಗಳನ್ನು ತೆಗೆದುಕೊಂಡಿರುತ್ತಾರೆ.

4. ನಂತರ ದಿನಾಂಕಃ 05.10.2019 ರಂದು ಆರೋಪಿತರ ವಿರುದ್ಧ ನಾನು ದೂರನ್ನು ಸಲ್ಲಿಸಿರುತ್ತೇವೆ. ದೂರನ್ನು ನಾನು ಹೇಳಿದಂತೆ ಚಾಸಾ-7 ರವರು ಬರೆದಿರುತ್ತಾರೆ. ಸಾಕ್ಷಿಯು ದೂರಿನ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರಿನ ಆಧಾರದ ಮೇಲೆ ತಯಾರಿಸಿದ ಪ್ರ.ವ.ವ. ಮೇಲಿರುವ ತಮ್ಮ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಪ್ರ.ವ.ವ.ಯನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

5. ದಿನಾಂಕಃ 06.10.2019 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ಚಾಸಾ-2 ಮತ್ತು 3 ರವರ ಸಮಕ್ಷಮ ನಾನು ತೋರಿಸಿದ ಜಾಗದಲ್ಲಿ 10-45 ರಿಂದ 11-45 ವರೆಗೆ ಪಂಚನಾಮೆ ಮಾಡಿರುತ್ತಾರೆ. ಆ ಕಾಲಕ್ಕೆ ಪೋಟೋವನ್ನು ತೆಗೆದಿರುತ್ತಾರೆ. ಸಾಕ್ಷಿಯು ಪಂಚನಾಮೆ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರತಿಸಲಾಯಿತು. ನಿಪಿ-3 ರ ಕಾಲಕ್ಕೆ ತೆಗೆದ ಪೋಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ಅಡಿಯಲ್ಲಿ ದೃಢೀಕರಣ ಪತ್ರ ಹಾಗೂ ಸಿ.ಡಿ. ಇಲ್ಲದ ಕಾರಣ ಸದರಿ ಪೋಟೋ ಗುರುತಿಸುವಿಕೆಯನ್ನು ಕೈಬಿಡಲಾಯಿತು.

6. ನಾನು ಮನೆಯಲ್ಲಿ ಉಪಚಾರ ಮಾಡಿಕೊಂಡ ಬಗ್ಗೆ ಪೊಲೀಸರಿಗೆ ಪುನರ್ ಹೇಳಿಕೆ ನೀಡಿರುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ಏನು ಹೇಳಿರುವುದಿಲ್ಲ. ಆರೋಪಿತರ ಪರ ವಕೀಲರ ತಕರಾರಿಲ್ಲದ ಕಾರಣ ಗೈರು ಹಾಜರಿದ್ದ 1 ರಿಂದ 3 ನೇ ಆರೋಪಿತರನ್ನು ನೋಡಿದರೆ ಗುರುತಿಸುವುದಾಗಿ ನುಡಿಯುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿಯವರಿಂದಃ

ನಾನ ಪುನರ್ ಹೇಳಿಕೆಯಲ್ಲಿ ಘಟನೆ ನನ್ನ ಮನೆಯ ಮುಂದೆ ನಡೆದಿರುತ್ತದೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಆರೋಪಿತರು ನನಗೆ ಹೊಡಿ ಬಡಿ ಮಾಡಿದ್ದರಿಂದ ಸಾರ್ವಜನಿಕವಾಗಿ ಅವಮಾನ ಆಗಿರುತ್ತದೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಸದರಿ ಘಟನೆ ಮುಂಜಾನೆ 11-00 ರಿಂದ 12-00 ಗಂಟೆವರೆಗೆ ನಡೆದಿರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಮುಂದುವರೆದು ಪುನರ್ ಹೇಳಿಕೆಯಲ್ಲಿ ಗಿರಣಿ ಕೀಲಿ ಮುರಿದಿಲ್ಲ ಹಾಗೂ ಯಾವುದೇ ಸಾಮಾನುಗಳನ್ನು ಆರೋಪಿತರು ತೆಗೆದುಕೊಂಡು ಹೋಗಿರುವುದಿಲ್ಲ ಎಂದು ಬರೆಸಿರುವುದಿಲ್ಲ. ಸಾಕ್ಷಿಯು ತಿರಸ್ಕರಿಸಿದ ಸದರಿ ಹೇಳಿಕೆ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ. ಎನ್.ಆರ್.ಕೆ. ವಕೀಲರಿಂದಃ

1. ನಾನು ಸುಮಾರು 8 ವರೆ ವರ್ಷಗಳಿಂದ ಮೇದೂರಿನಲ್ಲಿ ವಾಸವಾಗಿರುತ್ತೇನೆ. ಆರೋಪಿ 4 ಮತ್ತು 5 ರವರು ಎಷ್ಟು ವರ್ಷ ಕೋಡಮಗ್ಗಿಯಲ್ಲಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ 4 ಮತ್ತು 5 ರವರು ಘಟನಾ ಪೂರ್ವದಲ್ಲಿ ಘಟನಾ ಕಾಲಕ್ಕೆ ಹಾಗೂ ನಂತರದಲ್ಲಿ ಕೋಡಮಗ್ಗಿ ಗ್ರಾಮದಲ್ಲೇ ವಾಸವಾಗಿದ್ದರು ಎಂದರೆ ಸರಿ. ಆರೋಪಿ 1 ರವರು ಆರೋಪಿ 4 ಮತ್ತು 5 ರವರ ಜೊತೆ ಇದ್ದರು ಎಂದರೆ ಸರಿ. ಆರೋಪಿ 2 ರವರು ರಟ್ಟೀಹಳ್ಳಿಯಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಆರೋಪಿ ಹಿರೇಕೆರೂರಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಆರೋಪಿ 4 ಮತ್ತು 5 ರವರ ಜೀವಿತಾವಧಿಯಲ್ಲಿಯೇ ಆರೋಪಿ 1 ರಿಂದ 3 ರವರು ಮದುವೆಯಾಗಿ ಪ್ರತ್ಯೇಕವಾಗಿ ಇದ್ದಾರೆ ಎಂದರೆ ಸರಿ.

2. ಆರೋಪಿ 4 ರವರು ಮೇದೂರಿನಲ್ಲಿ ಗಿರಣಿಯನ್ನು ಬಾಡಿಗೆ ತೆಗೆದುಕೊಂಡು ಜೀವನ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಅದೇ ಗಿರಣಿ ಎದುರುಗಡೆ ಒಂದು ಜಾಗ ತೆಗೆದುಕೊಂಡು ಗಿರಣಿ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಗಿರಣಿಯನ್ನು ಆರೋಪಿ 4 ರವರು ನಡೆಸುತ್ತಿದ್ದರು ಎಂದರೆ ಸಾಕ್ಷಿಯು ಆರೋಪಿ 4 ಮತ್ತು ಚಾಸಾ-4 ರವರು ಒಟ್ಟಿಗೆ ನಡೆಸುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿ 4 ರವರು ಚಾಸಾ-4 ರವರೊಂದಿಗೆ ಅನ್ಯೋನ್ಯವಾಗಿದ್ದರು ಎಂದರೆ ಸಾಕ್ಷಿಯು ಮಕ್ಕಳೆಂದ ಮೇಲೆ ಪ್ರೀತಿ ಇರುತ್ತದೆ ಎಂದು ನುಡಿಯುತ್ತಾರೆ. ಆ ಕಾರಣದಿಂದ ಆರೋಪಿ 4 ರವರು ಚಾಸಾ-4 ರವರ ಹೆಸರಿಗೆ ಗಿರಣಿಯನ್ನು ಖರೀದಿಸಿದ್ದರು ಎಂದರೆ ಸಾಕ್ಷಿಯು ಅವರು ಖರೀದಿಸಿದ್ದು ಗೊತ್ತಿಲ್ಲ, ನನ್ನ ಗಂಡ ಸ್ವತಃ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ.

4. ನನ್ನ ಗಂಡ ಹಾಗೂ ಆರೋಪಿತರ ಮಧ್ಯೆ ಈ ಹಿಂದೆ 7-8 ಬಾರಿ ಪಂಚಾಯತಿ ನಡೆದಿರುತ್ತದೆ ಎಂದರೆ ಸರಿ. ಪಂಚಾಯತಿಯಲ್ಲಿ ಗಿರಣಿಯನ್ನು ಆರೋಪಿ 4 ರವರ ಜೀವನಾಂಶಕ್ಕಾಗಿ ತೆಗೆದಿದ್ದರು ಎಂದರೆ ಸಾಕ್ಷಿಯು ಪಂಚಾಯತಿ ಗಿರಣಿಯ ಸಂಬಂಧ ನಡೆದಿಲ್ಲ ಎಂದು ನುಡಿಯುತ್ತಾರೆ. ಪಂಚಾಯತಿ ಹಣದ ವ್ಯವಹಾರವಾಗಿ ನಡೆದಿತ್ತು. ಪಂಚಾಯತಿಯಲ್ಲಿ ಯಾರು ಯಾರಿಗೆ ಎಷ್ಟು ಹಣ ಹಾಗೂ ವಸ್ತುಗಳನ್ನು ಕೊಟ್ಟಿರುತ್ತಾರೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಪಂಚಾಯತಿ ನಂತರ ಆರೋಪಿ 1, 4, 5 ಹಾಗೂ ಚಾಸಾ-4 ರವರು ಒಪ್ಪಿಗೆ ಕರಾರು ಪತ್ರವನ್ನು ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪಂಚಾಯತಿ ಹಿರೇಕೆರೂರ ಪೊಲೀಸ್ ಠಾಣೆಯಲ್ಲಿ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಪಂಚಾಯತಿ ಪ್ರಕಾರ ಗಿರಣಿಯಲ್ಲಿ ಆರೋಪಿ 1 ಹಾಗೂ 4 ರವರು ಇಟ್ಟುಕೊಂಡು ಜೀವನ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

5. ಚಾಸಾ-4 ರವರು ಆರೋಪಿ 4 ರವರ ವಿರುದ್ಧ ಹಿಸ್ಸೆ ಕೋರಿ ದಾವೆ ಸಂಖ್ಯೆ: 179/2020 ನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ 4 ರವರು ಸ್ವಯಾರ್ಜಿತ ಆಸ್ತಿ ಅದರಲ್ಲಿ ಹಿಸ್ಸೆ ಬರುವುದಿಲ್ಲ ಎಂಬ ಕಾರಣದಿಂದ ಸದರಿ ದಾವೆಯನ್ನು ಹಿಂಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರಿಗೂ ಹಾಗೂ ಘಟನೆಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಗಿರಣಿಯ ಕಬ್ಜಾ ಪಡೆಯುವ ಉದ್ದೇಶದಿಂದ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.